ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಎಸ್. ಗಂಗಾಧರಯ್ಯ, ಪದವಿಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿ ನಿವೃತ್ತರು. ಕಥೆ ಮತ್ತು ಅನುವಾದಗಳ ಮೂಲಕ ಪ್ರಸಿದ್ಧರು. 'ನವಿಲ ನೆಲ', 'ಒಂದು ಉದ್ದನೆಯ ನೆರಳು', 'ದೇವರ ಕುದುರೆ', 'ಮಣ್ಣಿನ ಮುಚ್ಚಳ' ಪ್ರಕಟಿತ ಕಥಾ ಸಂಕಲನಗಳು. 'ಎರೆ ನೆತ್ತಿ' – ಈತನಕದ ಕಥೆಗಳ ಗುಚ್ಛ. 'ವೈಕಂ ಕಥೆಗಳು' ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಅನುವಾದಿತ ಕೃತಿ

ಕುರುಹೂ ಕಾಣದೆ ಭೂಮಿಗಿಳಿದುಹೋದ. ತನ್ನ ಅಂದಾಜು ತಪ್ಪಿರಬಹುದೆಂದು ತೋಟದ ತುಂಬೆಲ್ಲಾ ಸಮಾಧಿಗಾಗಿ ತಡಕಾಡಿದ. ಎಲ್ಲೂ ಅದರ ಸುಳಿವು ಸಿಕ್ಕದೇ ಕುಸಿದು ಕೂತ ಗದ್ದಿಗ್ಯಪ್ಪ 'ಗಾಂಧಿ, ಕಂದಾ ಗಾಂಧಿ' ಅಂತ ಇದ್ದಬದ್ದ ಬಿರುವನ್ನೆಲ್ಲಾ ಬಿಟ್ಟು ಕೂಗಿದ. 'ನನ್ನ ಜಮೀನು ನುಂಗಿಕೊಂಡದ್ದಲ್ಲದೆ ನನ್ನ ಮಗನ ಸಮಾಧೀನೂ ನುಂಗಿ ನರ್ಕುಂಡಿದೀರೇನೋ' ಗದ್ದಿಗ್ಯಪ್ಪ ಅಬ್ಬರಿಸಿದ. ಕಳೆದ ಇಪ್ಪತ್ತು ವರ್ಷಗಳಲ್ಲಿ ಗದ್ದಿಗ್ಯಪ್ಪನಿಗೆ ಬಂದ ಮೊದಲ ಸಿಟ್ಟು ಅದಾಗಿತ್ತು. ಅದು ಆ ಇರುಳಿನ ನೀರವತೆಯಲ್ಲಿ ಅನುರಣಿಸಿತು. ಅದರ ಬಿರುವಿಗೆ ಅವನಿಗೆ ಕಳ್ಳತ್ತಿದಂಗಾಗಿ ಕೂತಿದ್ದವನು ಹಂಗೇ ಪಕ್ಕಕ್ಕುರುಳಿಕೊಂಡ.

ಗದ್ದಿಗ್ಯಪ್ಪನಿಗೆ ಎಚ್ಚರವಾದಾಗ ಚಂದ್ರ ಮುಳುಗಿದ್ದ. ತೋಟದಂಥ ತೋಟವೆಲ್ಲಾ ಕಪ್ಪು ಮಸಿ ಬಳುಕಂಡು ಕೂತಿತ್ತು. ಮಾಮೇರಿ ಸುರಿದಿದ್ದ ಕಾವಳಕ್ಕೆ ತೊಟ್ಟ ಬಟ್ಟೆಗಳೆಲ್ಲಾ ತೊಯ್ದುಹೋಗಿದ್ದವು. ಗದ್ದಿಗ್ಯಪ್ಪನ ಕಣ್ಣಿನಿಂದ ವಸರುತ್ತಿದ್ದ ನೀರು ಅವನ ಗಡ್ಡದೊಳಗಾಸಿ ದಾರಿ ಮಾಡಿಕೊಂಡು ಕೆಳಕ್ಕೆ ತೊಟ್ಟಿಕ್ಕುತ್ತಿತ್ತು. ಮತ್ತೆ ಮಗನ ಹೆಸರಿಡಿದು ಜೋರಾಗಿ ಕೂಗಲು ಯತ್ನಿಸಿದ ಗದ್ದಿಗ್ಯಪ್ಪನ ಗಂಟಲಿನೊಳಗಿಂದ ದನಿ ಆಚೆ ಬರಲು ಸತಾಯಿಸಿತು. ಗದ್ದಿಗ್ಯಪ್ಪ ಮನೆಯ ದಾರಿ ಹಿಡಿಯುವ ಹೊತ್ತಿಗೆ ಅಚ್ಚಗಾಗಲು ಕೆಲವೇ ಗಂಟೆಗಳು ಉಳಿದಿದ್ದವು.

## 2

ಗದ್ದಿಗ್ಯಪ್ಪ ಹುಟ್ಟೂರನ್ನು ಬಿಟ್ಟು ಇಪ್ಪತ್ತು ವರ್ಷಗಳ ಮೇಲಾಗಿತ್ತು. ಆಗವನಿಗೆ ಅರವತ್ತರ ಆಸುಪಾಸು. ಈಗವನ ವಾರಿಗೆಯವರು ಅಂತ ಊರಿನಲ್ಲಿ ಜವರಜ್ಜನನ್ನು ಬಿಟ್ಟರೆ ಮತ್ಯಾರೂ ಉಳಿದಿರಲಿಲ್ಲ. ಜವರಜ್ಜನಿಗೂ ಕಣ್ಣು ಮದ್ದಿಷ್ಟವಾಗಿ, ಅರೆಗಿವುಡಾಗಿ ಕೂತರೆ ಏಳಲಾಗದ ಸ್ಥಿತಿಯಲ್ಲಿದ್ದ. ಗದ್ದಿಗ್ಯಪ್ಪ ಅವನಿಗೆ ಎದುರಾದರೂ ಅವನನ್ನು ಗುರುತಿಸಲಾಗತ್ತಿರಲಿಲ್ಲ. ಏಕೆಂದರೆ ಸದಾ ಮುಖಚೌರ ಮಾಡಿಕೊಂಡು, ಬಿಳಿ ಪಂಚೆ ಬಿಳಿ ಅಂಗಿಯನ್ನು ತೊಡುತ್ತಿದ್ದ ಆ ಗದ್ದಿಗ್ಯಪ್ಪ ಮಾತ್ರ ಅವನ ನೆನಪಿನಲ್ಲಿದ್ದ. ಅದೊಂದು ದಿನ ಇದ್ದಕ್ಕಿದ್ದಂತೆ ಕಣ್ಮರೆಯಾಗಿದ್ದ ಗದ್ದಿಗ್ಯಪ್ಪ ಎಲ್ಲೋ ಹೋಗವನ್ನೆ ಆಗ ಬರಬಹುದು ಈಗ ಬರಬಹುದು ಅಂತ ಊರಿನವರು ಕಾದಿದ್ದೇ ಬಂತು. ಯಾವಾಗ ಗದ್ದಿಗ್ಯಪ್ಪ ಹತ್ತಾರು ವರುಷಗಳು ಉರುಳಿದರೂ ಮರಳಿ ಬರಲಿಲ್ಲವೋ, ಇನ್ನು ಅವನು ಬರಲಾರ ಎಂಬುದು ಅವರಿಗೆ ಖಾತ್ರಿಯಾಗಿಹೋಗಿತ್ತು. ಹಂಗಾಗಿ ಊರಿಗೆ ಊರೇ ಅವನ ಬಗ್ಗೆ ತಮಗೆ ಹೆಂಗೆ ಬೇಕೋ ಹಂಗೆ ಥರಾವರಿ ಕಲ್ಪಿಸಿಕೊಂಡಿತ್ತು. ಕೆಲವರು ಬೇಕಂತಲೇ ಊರು ಬಿಟ್ಟು ಹೋಗಿದ್ದಾನೆ ಅಂದಿದ್ದರು. ಮತ್ತೆ ಕೆಲವರು ಅವನು ಹಂಗೆಲ್ಲಾ ಬಡಪಟ್ಟಿಗೆ ಹೋಗುವ ಅಸಾಮಿ ಅಲ್ಲವೇ ಅಲ್ಲ ಅಂತ ವಾದಿಸಿದ್ದರು. ಕೆಲವರು ಈಸು ದಿನಾದರೂ ಬರಲಿಲ್ಲ ಅಂದ ಮೇಲೆ ಸತ್ತೋ ಕೆಟ್ಟೋ ಹೋಗಿದ್ದಾನೆ ಅಂತಲೂ ಅಂದರು. ಒಂದಿಬ್ಬರು ತಾವು ಉತ್ತರ ಭಾರತದ ಕಡೆ ಪ್ರವಾಸ ಹೋಗಿದ್ದಾಗ ಗದ್ದಿಗ್ಯಪ್ಪನನ್ನು ಕಂಡಿದ್ದಾಗಿಯೂ, ತಮ್ಮನ್ನು ಕಾಣುತ್ತಲೇ ಅವನಿಗೆ ತಮ್ಮ ಗುರುತು ಪತ್ತೆಯಾಗಿ ಒಂದೇ ಚಣಕ್ಕೆ ಕಣ್ಮೆಂಚಾಗಿ ಬಿಟ್ಟಿದ್ದ ಅಂತ ಬೂಸಿ ಬಿಟ್ಟಿದ್ದರು. ಹಿಂಗೆ ಗದ್ದಿಗ್ಯಪ್ಪ ಆ ಊರಿನಲ್ಲಿ ಥರಾವಾರಿ ಮಾತಿಗೆ ಆಹಾರವಾಗಿದ್ದ.

ಯಾವಾಗ ವರುಷ ಇಪ್ಪತ್ತು ಕಳೆದರೂ ಗದ್ದಿಗ್ಯಪ್ಪನ ಸುಳಿವು ಸಿಗಲಿಲ್ಲವೋ ಪಕ್ಕದ ಹೊಲದ ಸಿದ್ಮಲ್ಲ, ಗದ್ದಿಗ್ಯಪ್ಪನ ಎರಡು ಎಕರೆ ಹೊಲವನ್ನು ರಾಜಾರಸ್ತಾಗಿ ವತ್ತಲಿಸಿಕೊಂಡು ತನ್ನ ಎರಡು ಎಕರೆಯನ್ನೂ ಒಳಗೊಂಡಂತೆ ತೆಂಗಿನ ಗಿಡಗಳನ್ನು ಕಟ್ಟಿ ತೋಟ ಮಾಡಿಕೊಂಡುಬಿಟ್ಟಿದ್ದ. ಯಾಕಪ್ಪಾ ಹಿಂಗೆ ಅಂತ ಅವರಿವರು ಅಂದಾಗ ಗದ್ದಿಗ್ಯಪ್ಪ ತನಗದನ್ನು